ರೌಂಡ್ ಆಫ್ ಮಾಡಿದರು, ಇದರ ಪರಿಣಾಮವಾಗಿ ಮೊದಲನೆಯ ಸ್ಟೇಜ್‌ಗೆ 1–25 ಇದ್ದುದು 1–50 ಆಯಿತು, ಇದೇ ರೀತಿಯಲ್ಲಿ ಬೇರೆ ಸ್ಟೇಜ್‌ಗಳಲ್ಲಿ ಅಂದರೆ ಉದಾಹರಣೆಗೆ 10ನೇ ಸ್ಟೇಜ್‌ನಲ್ಲಿ 1–50 ನ್ನು 10ರಿಂದ ಗುಣಾಕಾರ ಮಾಡಿದ್ದರಿಂದ ಉದ್ದಕ್ಕೂ ಜಾಸ್ತಿಯಾಯಿತು. ಈಗ ಅದನ್ನು ಮನಗಂಡು ತಾವೆಲ್ಲಾ ಚರ್ಚೆ ಮಾಡಿದ ಮೇಲೆ ತಮ್ಮ ಸಲಹೆಯನ್ನು ತೆಗೆದುಕೊಂಡು 25 ಪೈಸೆಗೇ ರೌಂಡ್ ಆಫ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇದು 1–3–93ರಿಂದ ಜಾರಿಗೆ ಬರುತ್ತದೆ.

18–3–93 ರಿಂದ ಸಾಮಾನ್ಯ ಗ್ರಾಮಾಂತರ ಬಸ್ಸುಗಳ ದರದ ಏರಿಕೆಯು ಶೇಕಡ 7ರಷ್ಟನ್ನು ಕಡಿತಗೊಳಿಸಿರುವುದರಿಂದ ದರದ ರಚನೆಯನ್ನು 50 ಪೈಸೆಗೆ ರೌಂಡ್ ಆಫ್ ಮಾಡಲಾಯಿತು. ಈಗ ಇದನ್ನು 25 ಪೈಸೆಗೆ ರೌಂಡ್ ಆಫ್ ಮಾಡಲು ನಿರ್ಧರಿಸಲಾಗಿದೆ. ಇದು ಸಾಮಾನ್ಯ ಗ್ರಾಮೀಣ ಬಸ್ಸುಗಳ ದರಗಳಿಗೆ ಮೊದಲ ನಾಲ್ಕು ಸ್ಟೇಜುಗಳಿಗೆ ಸೀಮಿತವಾಗಿರುತ್ತದೆ. ನಾಲ್ಕು ಸ್ಟೇಜ್‌ನ ನಂತರದ ಪ್ರಯಾಣಕ್ಕೆ ಇದು ಅನ್ವಯವಾಗುವುದಿಲ್ಲ. ಈ ಬದಲಾವಣೆಯು 1–3–93ರಿಂದ ಜಾರಿಗೆ ಬರುತ್ತದೆ ಎನ್ನತಕ್ಕ ಹೇಳಿಕೆಯನ್ನು ಸಾರಿಗೆ ಸಚಿವರು ಕೊಟ್ಟಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ:– ಹಾಗಾದರೆ ಇನ್ನೂ ಒಂದು ವಾರದವರೆಗೆ ಜನರು ಟ್ಯಾಕ್ಸ್‌ನ್ನು ಕೊಡಬೇಕಾದಂತಾಯಿತು.

SRI HARNAHALLI RAMASWAMY:– Fares are calculated by multiplying the distance by the basic fare. Resultant fare has been rounded off to 50 paise in case of ordinary services and the next rupee in the case of express, semi–luxury and luxury services. As a result no change in the fares of the first four stages of ordinary service. ಸಾಮಾನ್ಯವಾಗಿರತಕ್ಕ ಬಸ್ ಸರ್ವಿಸ್‌ಗಳಿಗೆ 21–2–93ರಿಂದಲೇ ಇದು ಕಡಿಮೆಯಾಗಿದೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಾರಿಗೆ ಸಚಿವರ ಪರವಾಗಿ ಹೇಳುವುದಾದರೆ ಯಾವುದೇ ಕಾರಣದಿಂದಲೂ ಶೇಕಡ 7 ಪರ್ಸೆಂಟ್ ಕಡಿಮೆ ಮಾಡಿದ್ದೇವಲ್ಲಾ ಈ ಒಂದು ಮಿತಿಗೆ ಎಲ್ಲವೂ ಆಗಿರುತ್ತದೆಯೇ ವಿನಹ ಅದಕ್ಕಿಂತ ಮೇಲೆ ಹೋಗುವುದಿಲ್ಲ, ಏನಾದರೂ ಲೆಕ್ಕಾಚಾರದಲ್ಲಿ ತಪ್ಪಾಗಿದ್ದರೆ ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ.

SRI P.G.R. SINDIA:– The only assurance we want from the Chief Minister is, ಮೊದಲ ನಾಲ್ಕು ಸ್ಟೇಜ್‌ನಲ್ಲಿ 7 ಪರ್ಸೆಂಟ್ ದರವೇನು ಕಡಿಮೆಯಾಗಿಲ್ಲ, ಅದು ಹೆಚ್ಚಾಗಿದೆ, ಆದುದರಿಂದ 7 ಪರ್ಸೆಂಟನ್ನು ಕಡಿಮೆ ಮಾಡುತ್ತೇವೆಂದು ಆಶ್ವಾಸನೆಯನ್ನು ನಮಗೆ ಕೊಟ್ಟರೆ ಸಾಕು, ಅದು 1–3–1993ರಿಂದ ಕೊಡಬೇಕು. That is all the assurance we want.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಆಗಬಹುದು.

1.10 ಪಿ.ಎಂ.

ಮಂತ್ರಿಗಳ ಹೇಳಿಕೆ

ಬಿ.ಜೆ.ಪಿ. ಕಾರ್ಯಕರ್ತರ ಬಂಧನ, ಬಿಡುಗಡೆ

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಮತ್ತು ವಿರೋಧಪಕ್ಷದ ನಾಯಕರು ಮಾನ್ಯ ಯಡಿಯೂರಪ್ಪನವರು ಶ್ರೀ ರುಕ್ಮಯ್ಯ ಪೂಜಾರಿ,

ಶ್ರೀ ಶಂಕರಮೂರ್ತಿ ಮತ್ತು ನಾರಾಯಣ್ ರಾವ್ ಮನಹಳ್ಳಿ ಅವರ ಬಂಧನದ ಬಗ್ಗೆ ಹೇಳಿದರು. ಈಗಾಗಲೇ ಅವರು ಬಿಡುಗಡೆಯಾಗಿ ಸಧ್ಯಕ್ಕೆ ಇಲ್ಲಿಗೆ ಬರುತ್ತಿದ್ದಾರೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಬಿ.ಜೆ.ಪಿ. ಕಾರ್ಯಕರ್ತರ ಬಂಧನ.

ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರ ಒಂದು ರೀತಿಯ ಹುಡುಗಾಟಿಕೆಯ ಉತ್ತರವಾಗಿದೆ. ನಿನ್ನೆ ದಿನ ಬಳ್ಳಾರಿಯಲ್ಲಿ ನನ್ನನ್ನು ಅರೆಸ್ಟ್ ಮಾಡಿದರು. ನಮ್ಮನ್ನೆಲ್ಲಾ ಬಳ್ಳಾರಿ ಪೋಲೀಸ್ ಸ್ಟೇಷನ್‌ನಲ್ಲಿ ಬಿಟ್ಟರು. ಇಲ್ಲೂ ಅರೆಸ್ಟ್ ಮಾಡಿದರು ಏಕೆ ಅರೆಸ್ಟ್ ಮಾಡಿದರು, ಏನು ಕೇಸ್ ಹಾಕಿದರು, ಏಕೆ ಈಗ ಬಿಡುಗಡೆ ಮಾಡಿದರು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಇಂಥ ಕೆಲಸ ಮಾಡುತ್ತಿರುವುದು ಹೊಸದೇನೂ ಅಲ್ಲ. ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆಯನ್ನು ಮಾಡುತ್ತೇವೆಂದು ಶ್ರೀ ಯಡಿಯೂರಪ್ಪನವರು ಕುಳಿತರು ಆ ಸಂದರ್ಭದಲ್ಲೂ ಕೂಡ ಅರೆಸ್ಟ್ ಮಾಡಿದರು. ಅರೆಸ್ಟ್ ಮಾಡಿ 28ನೇ ತಾರೀಖು ತನಕ ಅವರನ್ನು ಜೈಲ್ಲಿನಲ್ಲಿ ಇಡುತ್ತೇವೆಂದು ಹೇಳಿದರು. ಕೊನೆಗೆ 28ನೇ ತಾರೀಖಿಗಿಂತ ಮುಂಚೆ ಅಂದರೆ 2–3 ದಿವಸಗಳ ಮುಂಚೆ ಬೇಷರತ್ ಬಿಡುಗಡೆ ಮಾಡಿದರು. ಇದು ಸರ್ಕಾರದ ನೀತಿಯೇ ? ಸರ್ಕಾರ ಇದೆಯೋ ಇಲ್ಲವೋ ? ಇವರು ಸಂಬಂಧಪಟ್ಟ ಅಧಿಕಾರಿಗಳಿಗೆ, ಪೋಲೀಸ್ ಅಧಿಕಾರಿಗಳಿಗೆ ಅರೆಸ್ಟ್ ಮಾಡಿ ಎಂದು ಸೂಚನೆ ಕೊಟ್ಟಿದ್ದಾರೋ ? ಅಥವಾ ಅವರಷ್ಟಕ್ಕೆ ಅವರೇ ಮಾಡಿದ್ದಾರೋ, ಈ ಸರ್ಕಾರ ಏನು ಕೆಲಸ ಮಾಡುತ್ತಿದ್ದೆ. ನಾವು ಒಂದು ವಿರೋಧಪಕ್ಷವಾಗಿ, ಇಲ್ಲ ಪ್ರಜಾಪ್ರಭುತ್ವವನ್ನು ಉಳಿಸುತ್ತೇವೆಂದು ಹೇಳುವುದಕ್ಕೆ ನಮಗೆ ಹಕ್ಕು ಇಲ್ಲವೇ, ಅಥವಾ ಸಂಘಟನಾತ್ಮಕವಾಗಿ ಜನರ ವಿಚಾರಗಳನ್ನು ತೆಗೆದುಕೊಂಡು ನಾಲ್ಕು ರಾಜ್ಯಗಳಲ್ಲಿ ಜನತೆಯಿಂದ ಚುನಾಯಿತವಾದ ಬಿ.ಜೆ.ಪಿ. ಸರ್ಕಾರಗಳನ್ನು ವಜಾ ಮಾಡಿದ ವಿರುದ್ಧ ಚುನಾವಣೆ ಮಾಡಿ ಎಂದು ಜೈಲು ಸೇರುವುದು ತಪ್ಪೇ ? ಏಕೆ ಈ ರೀತಿ ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೋ, ನಮಗೆ ಅರ್ಥ ಆಗುತ್ತಿಲ್ಲ. ಅದಕ್ಕೊಸ್ಕರ ನಾನು ಕೇಳುವುದು ಇಷ್ಟೇ. ತಾವು ಒಂದು ರಾಜ್ಯದ ಮುಖ್ಯಮಂತ್ರಿಗಳಾಗಿ ವಿಧಾನಸಭೆ ನಡೆಯುತ್ತಿರುವ ಸಂದರ್ಭದಲ್ಲಿ ಒಬ್ಬ ಶಾಸಕರು ಪ್ರಜಾಪ್ರಭುತ್ವ ಉಳಿಸುತ್ತೇವೆಂದು ಜನರ ಸಂಘಟನೆ ಮಾಡಿಕೊಂಡು ಹೋಗಿರುವಂತಹ ಸಂದರ್ಭದಲ್ಲಿ ಇವನ್ನು ಬಂಧನ ಮಾಡಿದ್ದಾರೆ, ಇದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೊ, ಎಲ್ಲೆಲ್ಲಿ ಪ್ರದರ್ಶನ ಮಾಡಿದ್ದಾರೆ ಅವರನ್ನೆಲ್ಲಾ ಬಂಧನ ಮಾಡಬೇಕು ಎಂಬುದು ಇವರ ಅಪೇಕ್ಷೆ ಇತ್ತೋ ಏನು ಎಂಬುದನ್ನು ದಯಮಾಡಿ ತಿಳಿಸಬೇಕು.

ಡಾ।। ವೈ. ನಾಗಪ್ಪ:– ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಎಸ್. ಈಶ್ವರಪ್ಪ:– ಉತ್ತರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೋ, ಕೊಡಲಿ ನನಗೆ ಅಭ್ಯಂತರವಿಲ್ಲ. ಆದರೆ ಇಲ್ಲಿ ಮುಖ್ಯಮಂತ್ರಿಗಳು ನಾಗಪ್ಪನವರೋ ಅಥವಾ ವೀರಪ್ಪಮೊಯಿಲಿಯವರೋ ನನಗೆ ಗೋತ್ತಿಲ್ಲ, ಅವರು ಮುಖ್ಯಮಂತ್ರಿಗಳು ಆದರೆ ಸಂತೋಷ 4ನೇಯ ಮುಖ್ಯಮಂತ್ರಿಗಗಳು ನಾಗಪ್ಪನವರು ಆಗಿದ್ದಾರೆಯೇ ಎಂದು ನನಗೆ ಅನುಮಾನವಾಗುತ್ತಿದೆ.

ಡಾ।। ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೇ, ಈಶ್ವರಪ್ಪನವರು ಯಡಿಯೂರಪ್ಪನವರ ಅರೆಸ್ಟ್ ಆಯಿತು ಎಂದು ಹೇಳಿದರು. ಏಕೆ ಬಂಧನಕ್ಕೆ ಒಳಗಾಗಿದ್ದಾರೆ ಅದು ಪ್ರಶ್ನೆ ಬೇರೆ. ಆದರೆ ನನಗೆ ಗೊತ್ತಿದ್ದ ಹಾಗೆ ನನ್ನ ಬಡಾವಣೆಯ ಪೋಲಿಸರಿಗೆ ಒಂದು ಟಾರ್‌ಗೇಟ್ ಫಿಗರ್ ಕೊಟ್ಟಿದ್ದಾರೆ ಬಿ.ಜೆ.ಪಿ. ಅವರಿಗೆ ಹೆಗ್ಗಳಿಕೆ ಸಹಸ್ರ ಸಹಸ್ರ ಕಾರ್ಯಕರ್ತರ ಬಿ.ಜೆ.ಪಿ.ಯ ಬಂಧನ. ಟಿಕೇಟ್ ತೆಗೆದುಕೊಂಡಿಲ್ಲ, ರೈಲು ಹತ್ತಿದ್ದಾರೆ, ಅದಕ್ಕೆ ಇಳಿಸಿದ್ದಾರೆ .....